All India Radio: Bangalore
National Bulletin In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

26.11.2025 19.35 PM

****************

ಮುಖ್ಯಾಂಶಗಳು

- ಭಾರತದ ಸಂವಿಧಾನ ದೇಶದ ಮಹಾಕಾವ್ಯ - ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿಮತ
- ಪುಣೆ ಎರಡನೇ ಹಂತದ ಮೆಟ್ರೋ ರೈಲು, ಅಪರೂಪದ ಖನಿಜಗಳ ಶಾಶ್ವತ ಆಯಸ್ಕಾಂತ ನಿರ್ಮಾಣ ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಇಂದು ಅನುಮೋದನೆ
- ಕಲ್ಲಿದ್ದಲು ಸಚಿವಾಲಯದಿಂದ ಮೂರು ಕಲ್ಲಿದ್ದಲು ಬ್ಲಾಕ್ ಹರಾಜು; ವಾರ್ಷಿಕ ೪ ಸಾವಿರ ಕೋಟಿ ರೂಪಾಯಿ ಆದಾಯ ನಿರೀಕ್ಷೆ
- ಟೇಬಲ್ ಟೆನಿಸ್; ಐಟಿಟಿಎಫ್ ವಿಶ್ವ ಯುವ ಚಾಂಪಿಯನ್‌ಶಿಪ್‌ನಲ್ಲಿ ಒಂದು ಬೆಳ್ಳಿ, ಒಂದು ಕಂಚು ಗೆದ್ದ ಭಾರತೀಯ ಆಟಗಾರರು

***************

ಭಾರತದ ಸಂವಿಧಾನ ದೇಶದ ರಾಷ್ಟ್ರೀಯ ಮಹಾಕಾವ್ಯವಾಗಿದ್ದು, ಅದರ ನಿಬಂಧನೆಗಳನ್ನು ಪಾಲಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ನವದೆಹಲಿಯಲ್ಲಿ ಇಂದು ಸುಪ್ರೀಂ ಕೋರ್ಟ್ ಆಯೋಜಿಸಿದ್ದ ಸಂವಿಧಾನ ದಿನಾಚರಣೆಯನ್ನುದ್ದೇಶಿಸಿ ಮಾತನಾಡಿದ ರಾಷ್ಟ್ರಪತಿಗಳು, ಈ ವಿಷಯ ತಿಳಿಸಿದರು. ಮಕ್ಕಳಿಗೆ ಸಂವಿಧಾನದ ಬಗ್ಗೆ ಅರಿವು ಮೂಡಿಸಬೇಕು ಎಂದು ಅವರು ಒತ್ತಿ ಹೇಳಿದರು.

***************

ದೇಶವು ವಿಕಸಿತ ಮತ್ತು ಆತ್ಮನಿರ್ಭರ ಭಾರತದತ್ತ ಸಾಗುತ್ತಿರುವುದು ಸಮಾನತೆ, ನ್ಯಾಯ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಸಾಂವಿಧಾನಿಕ ತತ್ವಗಳಿಂದ ಪ್ರೇರಿತವಾಗಿದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದ್ದಾರೆ.

ದೆಹಲಿ ವಿಧಾನಸಭೆಯಲ್ಲಿ ಇಂದು ನಡೆದ ಸಂವಿಧಾನ ದಿನಾಚರಣೆಯ ಸಂದರ್ಭದಲ್ಲಿ ಕಾಫಿ ಬುಕ್ ಟೇಬಲ್ ಅನ್ನು ಬಿಡುಗಡೆ ಮಾಡಿದ ಅವರು, ಸಂವಿಧಾನವು ಬುದ್ಧಿಶಕ್ತಿಯಿಂದ ಹುಟ್ಟಿದ್ದು ಭಾರತದ ಆತ್ಮವಾಗಿದೆ ಎಂದು ಹೇಳಿದರು.

ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗುವ ಮತ್ತು ದೇಶದಲ್ಲಿ ೨೫ ಕೋಟಿಗೂ ಹೆಚ್ಚು ಜನರನ್ನು ಬಡತನ ರೇಖೆಯಿಂದ ಹೊರತರುವ ದೇಶದ ಇತ್ತೀಚಿನ ಸಾಧನೆಗಳನ್ನು ಉಪರಾಷ್ಟ್ರಪತಿ ಶ್ಲಾಘಿಸಿದರು.

ಈ ಕಾರ್ಯಕ್ರಮದಲ್ಲಿ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಮತ್ತು ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಭಾಗವಹಿಸಿದ್ದರು.

***************

ಪುಣೆ ಮೆಟ್ರೋ ರೈಲು ಯೋಜನೆ ಹಂತ-೨ಕ್ಕೆ ಹಾಗೂ ಅಪರೂಪದ ಖನಿಜಗಳ ಶಾಶ್ವತ ಆಯಸ್ಕಾಂತ ನಿರ್ಮಾಣ ಯೋಜನೆಗೆ ಇಂದು ಸಚಿವ ಸಂಪುಟ ಅನುಮೋದನೆ ನೀಡಿದೆ.

ಸಂಪುಟ ಸಭೆಯ ನಂತರ ಮಾಹಿತಿ ನೀಡಿದ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಅಪರೂಪದ ಖನಿಜಗಳನ್ನು ಬಳಸಿ ಶಾಶ್ವತ ಆಯಸ್ಕಾಂತಗಳನ್ನು ದೇಶದಲ್ಲೇ ನಿರ್ಮಿಸಲು ಉದ್ದೇಶಿಸಲಾಗಿದ್ದು, ೭ ಸಾವಿರದ ೨೮೦ ಕೋಟಿ ರೂಪಾಯಿ ವೆಚ್ಚದ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ರಕ್ಷಣಾ ಸಲಕರಣೆಗಳು, ವೈದ್ಯಕೀಯ ಉಪಕರಣಗಳು ಸೇರಿದಂತೆ ವೈಮಾನಿಕ ಸಾಧನಗಳ ತಯಾರಿಕೆಯಲ್ಲಿ ಆಯಸ್ಕಾಂತಗಳ ಉಪಯೋಗ ಅಧಿಕವಾಗಿದೆ. ಶಾಶ್ವತ ಆಯಸ್ಕಾಂತಗಳ ಬೇಡಿಕೆ ದೇಶದಲ್ಲಿ ನಿರಂತರವಾಗಿ ಹೆಚ್ಚುತ್ತಿದ್ದು, ಸಂಪೂರ್ಣ ಕೇಂದ್ರೀಕೃತ ವ್ಯವಸ್ಥೆಯನ್ನು ನಿರ್ಮಿಸಲಾಗುವುದು ಎಂದು ಅವರು ಹೇಳಿದರು.

ಧ್ವನಿ: ಅಶ್ವಿನಿ ವೈಷ್ಣವ್

ಪುಣೆ ಮೆಟ್ರೋ ರೈಲು ಯೋಜನೆಯ ಹಂತ-೨ ರ ಅಡಿಯಲ್ಲಿ ಸರ್ಕಾರ ಲೈನ್ ೪ ಖರಡಿ-ಹಡಪ್ಸರ್-ಸ್ವರ್ಗೇಟ್-ಖಡಕ್ವಾಸ್ಲಾ ಮತ್ತು ಲೈನ್ ೪ಎ - ನಾಲ್ ಸ್ಟಾಪ್-ವರ್ಜೆ-ಮಾಣಿಕ್ ಬಾಗ್ ಯೋಜನೆ ಸುಮಾರು ೬ ಸಾವಿರದ ೮೫೭ ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಐದು ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಅವರು ಹೇಳಿದ್ದಾರೆ.

***************

ಕಲ್ಲಿದ್ದಲು ಸಚಿವಾಲಯ ಇಂದು ೧೩ನೇ ಸುತ್ತಿನ ವಾಣಿಜ್ಯ ಕಲ್ಲಿದ್ದಲು ಗಣಿ ಹರಾಜಿನಲ್ಲಿ ಮೂರು ಕಲ್ಲಿದ್ದಲು ಬ್ಲಾಕ್‌ಗಳನ್ನು ಯಶಸ್ವಿಯಾಗಿ ಹರಾಜು ಮಾಡಿದೆ. ಮೂರು ಬ್ಲಾಕ್‌ಗಳು ವಾರ್ಷಿಕ ಸುಮಾರು ೪ ಸಾವಿರ ಕೋಟಿ ರೂಪಾಯಿಗಳ ಆದಾಯವನ್ನು ಗಳಿಸುವ ಸಾಧ್ಯತೆಯಿದೆ ಎಂದು ಸಚಿವಾಲಯ ತಿಳಿಸಿದೆ.

ಇದು ಸುಮಾರು ಏಳು ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಮತ್ತು ಸುಮಾರು ೬೬ ಸಾವಿರ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಾಧ್ಯತೆಯಿದೆ.

೨೦೨೦ ರಲ್ಲಿ ವಾಣಿಜ್ಯ ಕಲ್ಲಿದ್ದಲು ಗಣಿಗಾರಿಕೆ ಪ್ರಾರಂಭವಾದಾಗಿನಿಂದ, ಒಟ್ಟು ೧೩೬ ಕಲ್ಲಿದ್ದಲು ಬ್ಲಾಕ್‌ಗಳನ್ನು ಯಶಸ್ವಿಯಾಗಿ ಹರಾಜು ಮಾಡಲಾಗಿದೆ, ವರ್ಷಕ್ಕೆ ಸುಮಾರು ಮುನ್ನೂರ ಇಪ್ಪತ್ತೈದು ಮಿಲಿಯನ್ ಟನ್ ಉತ್ಪಾದನಾ ಸಾಮರ್ಥ್ಯವಿದೆ ಎಂದು ಸಚಿವಾಲಯ ತಿಳಿಸಿದೆ.

***************

ಭಾರತ ಮತ್ತು ಯುನೈಟೆಡ್ ಅರಬ್ ಎಮಿರೆಟ್ಸ್ ದೇಶಗಳು ದೂತಾವಾಸ, ವೀಸಾ ಮತ್ತು ಕಾನೂನು ಕ್ಷೇತ್ರಗಳಲ್ಲಿ ಸಹಕಾರವನ್ನು ಹೆಚ್ಚಿಸಲು ಒಪ್ಪಿಕೊಂಡಿವೆ.

ಇಂದು ಅಬುಧಾಬಿಯಲ್ಲಿ ನಡೆದ ಭಾರತ-ಯುಎಇ ಕಾನ್ಸುಲರ್ ವ್ಯವಹಾರಗಳ ಜಂಟಿ ಸಮಿತಿಯ ಆರನೇ ಸಭೆಯಲ್ಲಿ, ಉಭಯ ದೇಶಗಳಲ್ಲಿ ವಾಸಿಸುವ ನಾಗರಿಕರ ಸುರಕ್ಷತೆ, ಘನತೆ ಮತ್ತು ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳುವಲ್ಲಿ ಎರಡೂ ಕಡೆಯವರು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು.

ಭಾರತೀಯ ನಿಯೋಗದ ನೇತೃತ್ವವನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಅರುಣ್ ಕುಮಾರ್ ಚಟರ್ಜಿ ವಹಿಸಿದ್ದರು.

***************

೫೬ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಆರನೇ ದಿನವಾದ ಇಂದು ಎರಡು ಗೋವಾದ ಚಲನಚಿತ್ರಗಳು ಪ್ರೇಕ್ಷಕರ ಉತ್ತಮ ಪ್ರತಿಕ್ರಿಯೆಯೊಂದಿಗೆ ಗಮನ ಸೆಳೆದವು. ವೈಮಾನಿಕ್ - ದಿ ಪೈಲಟ್ ಚಿತ್ರ ಗಾಲಾ ಪ್ರಥಮ ಪ್ರದರ್ಶನ ಕಂಡಿದ್ದು, ೧೯೬೦ ರ ದಶಕದ ಗೋವಾದಲ್ಲಿ ನಡೆದ ಇಬ್ಬರು ಸಹೋದರರ ಹೃದಯಸ್ಪರ್ಶಿ ಕಥೆಯನ್ನು ಒಳಗೊಂಡಿದೆ. ನಿರ್ದೇಶಕ ನಿತೀಶ್ ಪ್ಯಾರಿಸ್ ಈ ಚಿತ್ರವನ್ನು ಗೋವಾದಿಂದ ಜಗತ್ತಿಗೆ ತೆರೆದ ಪ್ರೇಮ ಪತ್ರ ಎಂದು ಬಣ್ಣಿಸಿದರು.

ಈ ನಡುವೆ, ಯುವ ಚಲನಚಿತ್ರ ನಿರ್ಮಾಪಕ ಸೋಹಮ್ ಬೆಂಡೆ ನಿರ್ದೇಶನದ ಝೀರೋ ಬಲ್ಬ್ ಕೆಂಪು ಹಾಸಿನ ಸ್ವಾಗತ ಪಡೆಯಿತು.

ಇಫೀ ಪತ್ರಿಕಾಗೋಷ್ಠಿಯಲ್ಲಿ, ಇರಾನ್ ಮತ್ತು ಇರಾಕ್‌ನ ಚಲನಚಿತ್ರ ನಿರ್ಮಾಪಕರು ಎರಡು ಪ್ರಮುಖ ಚಿತ್ರಗಳನ್ನು ಪ್ರಸ್ತುತಪಡಿಸಿದರು. ವಿಭಿನ್ನ ಸಿನಿಮಾ ಸಂಪ್ರದಾಯಗಳಿದ್ದರೂ, ಎರಡೂ ತಂಡಗಳು ಸೆನ್ಸಾರ್‌ಶಿಪ್ ಹೇಗೆ ಸಾಮಾನ್ಯ ಜನರ ದೈನಂದಿನ ಜೀವನವನ್ನು ರೂಪಿಸುತ್ತದೆ ಎಂಬುದನ್ನು ಒತ್ತಿ ಹೇಳಿದರು.

ಅತ್ಯುತ್ತಮ ಚೊಚ್ಚಲ ಚಲನಚಿತ್ರ ಪ್ರಶಸ್ತಿಗಾಗಿ ಸ್ಪರ್ಧಿಸುತ್ತಿರುವ ಇರಾನ್‌ನ ಚಿತ್ರ - 'ಮೈ ಡಾಟರ್ಸ್ ಹೇರ್' - ರಹಾಃ ಇರಾನಿನ ಮಹಿಳೆಯರ ಹೋರಾಟಗಳನ್ನು ಪ್ರತಿಬಿಂಬಿಸುತ್ತದೆ ಎಂದು ಚಿತ್ರದ ನಿರ್ದೇಶಕ ಸೈಯದ್ ಹೆಸಾಮ್ ಫರಾಹ್ಮಂದ್ ಜೂ ಹೇಳಿದ್ದಾರೆ.

ಐಸಿಎಫ್‌ಟಿ ಯುನೆಸ್ಕೋ ಗಾಂಧಿ ಪದಕಕ್ಕಾಗಿ ಸ್ಪರ್ಧಿಸುತ್ತಿರುವ ಇರಾಕ್‌ನ ಚಿತ್ರ - 'ದಿ ಪ್ರೆಸಿಡೆಂಟ್ಸ್ ಕೇಕ್', ೧೯೯೦ರ ದಶಕದ ಸರ್ವಾಧಿಕಾರಿ ಆಡಳಿತದಲ್ಲಿನ ಜೀವನವನ್ನು ಚಿತ್ರಿಸಲು ಈ ಚಿತ್ರದಲ್ಲಿ ವೃತ್ತಿಪರರಲ್ಲದ ಕಲಾವಿದರನ್ನು ಬಳಸಲಾಗಿದೆ ಎಂದು ಚಿತ್ರದ ಸಂಪಾದಕ ಅಲೆಕ್ಸಾಂಡ್ರು-ರಾಡು ರಾಡು ವಿವರಿಸಿದರು.

***************

ಡೈರಿ ವಲಯವು ದೇಶದ ಪ್ರಮುಖ ಆಧಾರಸ್ತಂಭವಾಗಿದ್ದು, ಅದರ ಸಮೃದ್ಧಿ ಹಳ್ಳಿಗಳು ಮತ್ತು ರೈತರಿಂದ ಬರುತ್ತದೆ ಎಂದು ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ರಾಜ್ಯ ಸಚಿವ ಡಾ. ಎಸ್.ಪಿ. ಸಿಂಗ್ ಬಾಘೇಲ್ ಹೇಳಿದ್ದಾರೆ.

ನವದೆಹಲಿಯಲ್ಲಿ ನಡೆದ ೨೦೨೫ರ ರಾಷ್ಟ್ರೀಯ ಹಾಲು ದಿನಾಚರಣೆಯಲ್ಲಿ ಮಾತನಾಡಿದ ಅವರು, ಶ್ವೇತ ಕ್ರಾಂತಿಯ ಪಿತಾಮಹ ವರ್ಗೀಸ್ ಕುರಿಯನ್ ಮಾಡಿದ ಕಾರ್ಯ ಶ್ಲಾಘನೀಯ. ಶ್ವೇತ ಕ್ರಾಂತಿಯು ರೈತರನ್ನು ಮಧ್ಯವರ್ತಿಗಳಿಂದ ಮುಕ್ತಗೊಳಿಸಿತು ಮತ್ತು ಅವರ ಕೆಲಸಕ್ಕೆ ಘನತೆಯನ್ನು ನೀಡಿತು ಎಂದು ಹೇಳಿದರು.

***************

ಒಡಿಶಾ ವಿಧಾನಸಭೆಯ ಚಳಿಗಾಲದ ಅಧಿವೇಶನ ನಾಳೆಯಿಂದ ಆರಂಭವಾಗಲಿದ್ದು, ಮೊದಲ ದಿನದಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅಧಿವೇಶನ ಉದ್ದೇಶಿಸಿ ಮಾತನಾಡಲಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಒಡಿಶಾ ವಿಧಾನಸಭೆಯಲ್ಲಿ ಶಾಸಕರಾಗಿ ತಮ್ಮ ರಾಜಕೀಯ ಜೀವನ ಆರಂಭಿಸಿದ್ದರು. ಈ ಭೇಟಿ ವೇಳೆ ಅವರು ತಾವು ಕಾರ್ಯನಿರ್ವಹಣೆ ಮಾಡುತ್ತಿದ್ದ ಕೊಠಡಿಗೂ ತೆರಳಿ ವೀಕ್ಷಣೆ ಮಾಡಲಿದ್ದಾರೆ.

ಇದೇ ಮೊದಲ ಬಾರಿಗೆ, ಒಡಿಶಾ ವಿಧಾನಸಭೆಯ ಅಧಿವೇಶನವನ್ನು ಉದ್ದೇಶಿಸಿ ದೇಶದ ರಾಷ್ಟ್ರಪತಿಯೊಬ್ಬರು ಮಾತನಾಡುತ್ತಿರುವುದು ವಿಶೇಷವಾಗಿದೆ.

***************

ಆಧಾರ್ ದತ್ತಾಂಶದ ನಿಖರತೆಯನ್ನು ಕಾಪಾಡಿಕೊಳ್ಳಲು ದೇಶಾದ್ಯಂತ ನಡೆಯುತ್ತಿರುವ ಪರಿಷ್ಕರಣಾ ಪ್ರಯತ್ನದ ಭಾಗವಾಗಿ, ಭಾರತೀಯ ವಿಶಿ? ಗುರುತಿನ ಪ್ರಾಧಿಕಾರ ಯುಐಡಿಎಐ ಮೃತ ವ್ಯಕ್ತಿಗಳ ಎರಡು ಕೋಟಿಗೂ ಆಧಿಕ ಆಧಾರ್ ಸಂಖ್ಯೆಗಳನ್ನು ನಿಷ್ಕ್ರಿಯಗೊಳಿಸಿದೆ. ಈ

ದತ್ತಾಂಶವನ್ನು ಭಾರತೀಯ ರಿಜಿಸ್ಟ್ರಾರ್ ಜನರಲ್, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಯುಐಡಿಎಐ ಪಡೆದುಕೊಂಡಿದೆ ಎಂದು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ತಿಳಿಸಿದೆ.

ಯಾವುದೇ ಆಧಾರ್ ಸಂಖ್ಯೆಯನ್ನು ಇನ್ನೊಬ್ಬ ವ್ಯಕ್ತಿಗೆ ಎಂದಿಗೂ ಮರು ನಿಯೋಜಿಸಲಾಗುವುದಿಲ್ಲ ಎಂದು ತಿಳಿಸಲಾಗಿದೆ.

***************

೨೦೨೬ ರ ಗಣರಾಜ್ಯೋತ್ಸವ ಅಂಗವಾಗಿ ರಕ್ಷಣಾ ಸಚಿವಾಲಯ ಒಥಿಉov ನ ಸಹಯೋಗದೊಂದಿಗೆ, ಪ್ರತಿಯೊಬ್ಬ ನಾಗರಿಕರಿಗೆ, ವಿಶೇಷವಾಗಿ ವಿದ್ಯಾರ್ಥಿಗಳು ಮತ್ತು ಯುವ ಕಲಾವಿದರಿಗೆ ಮೂರು ಸ್ಪರ್ಧೆಗಳನ್ನು ಹಮ್ಮಿಕೊಂಡಿದೆ.

***************

ರೊಮೇನಿಯಾದಲ್ಲಿ ನಡೆದ ಐಟಿಟಿಎಫ್ ವಿಶ್ವ ಯುವ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ಟೇಬಲ್ ಟೆನಿಸ್ ಆಟಗಾರರು ಪ್ರಬಲ ಪ್ರದರ್ಶನ ನೀಡಿದ್ದು, ಒಂದು ಬೆಳ್ಳಿ ಮತ್ತು ಒಂದು ಕಂಚು ಪದಕಗಳನ್ನು ಗೆದ್ದಿದ್ದಾರೆ.

೧೯ ವ?ದೊಳಗಿನ ಬಾಲಕರ ತಂಡವು ಅತ್ಯುತ್ತಮ ಪ್ರದರ್ಶನದ ನಡುವೆ ಫೈನಲ್‌ನಲ್ಲಿ ಜಪಾನ್ ವಿರುದ್ಧ ೦-೩ ಅಂತರದಿಂದ ಸೋಲನುಭವಿಸಿತು.

೧೫ ವ?ದೊಳಗಿನ ಬಾಲಕಿಯರ ತಂಡವು ಸೆಮಿಫೈನಲ್ ತಲುಪಿ ಕಂಚಿನ ಪದಕ ಗೆಲ್ಲುವ ಮೂಲಕ ಭಾರತಕ್ಕೆ ಪದಕ ತಂದುಕೊಟ್ಟಿತು. ೧೯ ವ?ದೊಳಗಿನ ಬಾಲಕಿಯರ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ತಂಡವು ಚೈನೀಸ್ ತೈಪೆ ವಿರುದ್ಧ ೨-೩ ಅಂತರದಿಂದ ಸೋಲನುಭವಿಸಿತು.

******** ಮುಕ್ತಾಯ *******